ಒಬ್ಬ ಟೀವಿಯವನು ರಾಜಾರಾಮನಿಗೆ ಫೋನ್ ಮಾಡಿ, ಸುದ್ದಿಯನ್ನು ಪ್ರಕಟಿಸುವುದಾಗಿ ಬೆದರಿಕೆ ಹಾಕಿ, ಐದು ಲಕ್ಷ ರೂಪಾಯಿಗಳ ಬೇಡಿಕೆಯನ್ನಿಟ್ಟ! ಆಗ ಸ್ವಾಮೀಜಿಯವರು ಬೆಂಗಳೂರಿನಲ್ಲಿದ್ದರು; ರಾಜಾರಾಮನಿಗೆ ಏನು ಮಾಡಲೂ ತೋಚಲಿಲ್ಲ. ಫೋನಿನ ಗೊಡ್ಡು ಬೆದರಿಕೆಗೆ ತಲೆಕೆಡಿಸಿಕೊಳ್ಳದೆ ತನ್ನಷ್ಟಕ್ಕೆ ಇದ್ದುಬಿಟ್ಟ. ಮತ್ತೆ ಮತ್ತೆ ಕರೆ ಬಂದಾಗ, 'ನಮಗೂ ಅದಕ್ಕೂ ಸಂಬಂಧ ಇಲ್ಲ; ಯಾವ್ದಾ ಬೆಂಗಳೂರಿನ ಕಂಪನಿಯೋರನ್ನ ಕೇಳಿ; ನಾವಂತೂ ಐದು ರೂಪಾಯಿಯನ್ನೂ ಕೊಡೋದಿಲ್ಲ' ಎಂದ. ಮಾತು ಮುಗಿದು ಒಂದು ಗಂಟೆ ಆಗಿತ್ತೋ ಇಲ್ಲವೋ, ಶ್ರೀಮಠದ ತೋಟದಲ್ಲಿ ಮಂಗಗಳು ಸಾಯುತ್ತಿರುವ ಸುದ್ದಿಯು, ಕನ್ನಡದ ಟೀವಿ ಚಾನಲ್ ಒಂದರಲ್ಲಿ ಸಾಮಾನ್ಯ ಸುದ್ದಿಯಂತೆ ಪ್ರಸಾರಗೊಂಡಿತು. ಅದು ಮಧ್ಯಾಹ್ನದ ಹೊತ್ತಿಗೆ ಎಲ್ಲಾ ಸುದ್ದಿ ವಾಹಿನಿಗಳಲ್ಲಿ ರೆಕ್ಕೆ ಪುಕ್ಕಗಳನ್ನು ಪಡೆದುಕೊಂಡು, ಸಂಜೆ ರಾಷ್ಟ್ರೀಯ ಚಾನೆಲ್‌ಗಳಲ್ಲೂ ಪ್ರಸಾರವಾಗತೊಡಗಿತು. ಇದೇ ಸುದ್ದಿಯ ಸುತ್ತ ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ಚರ್ಚೆಗಳು ನಡೆಯಲು ಪ್ರಾರಂಭವಾದವು. ಕಾಯಿ ತುಂಬಿಕೊಂಡ ಬಾಳೆಯ ತೋಟದ ಹಿನ್ನೆಲೆಯಲ್ಲಿ, ಹಸುವಿನ ಕರುವೊಂದಕ್ಕೆ ಬಾಳೆಯ ಹಣ್ಣನ್ನು ತಿನ್ನಿಸುತ್ತಿರುವ ಸ್ವಾಮೀಜಿಯವರ ಅಪರೂಪದ ಫೋಟೊ ಮನೆಮನೆಯಲ್ಲಿ ಬಿತ್ತರಗೊಂಡಿತು. ಯಾರೂ ಕೇಳರಿಯದ ಸಾಗರದ ಮೂಲೆಯಲ್ಲಿದ್ದ ಈ ಮಠವು ಕರ್ನಾಟಕವಷ್ಟೇ ಯಾಕೆ ಇಡೀ ದೇಶದ ಮೂಲೆಮೂಲೆಗಳಲ್ಲಿ ವಿಕೃತಗೊಂಡು ವಿಜೃಂಭಿಸಿತು!

ಇನ್ನು ಪತ್ರಿಕೆಯವರು ಬಿಟ್ಟಾರೆಯೇ? 'ರಾಮ ಭಕ್ತರಿಂದ ಹನುಮ ಹೋಮ;' 'ರಾಮನ ಬಂಟನಿಗೆ ವೈಕುಂಠ;' 'ಮಠ ಹತ್ತಿಹೋದ ಮಂತ್ರಿಗಳು!' 'ಕಾಡು ಪಾಲಾದ ಕಾನೂನು...' ಸುದ್ದಿ ಸಂಪಾದಕರ ಪ್ರತಿಭೆಗೆ ತಕ್ಕಂತೆ ಅತ್ಯಾಕರ್ಷಕ ಶಿರೋನಾಮೆಯನ್ನು ಹೊತ್ತು, 'ಫೈಲ್'ನ ಸಾಂದರ್ಭಿಕ ಚಿತ್ರಗಳನ್ನೂ ಇದೇ ಸ್ಥಳದಲ್ಲಿ ತೆಗೆದ ಚಿತ್ರವೆಂಬಂತೆ ಮುದ್ರಿಸಿ ಮಿಂಚಿದವು.

ಒಂದು ಪತ್ರಿಕೆಯವರಂತೂ ಬಾಯಿಯಲ್ಲಿ ಬಾಳೆಹಣ್ಣನ್ನು, ಮಗ್ಗಲಲ್ಲಿ ತನ್ನ ಮರಿಯನ್ನೂ ಇಟ್ಟುಕೊಂಡು ಸತ್ತುಬಿದ್ದಿದ್ದ ಕಪಿಯೊಂದರ ಬಣ್ಣದ ಫೋಟೋವನ್ನು ಮುಖಪುಟಲ್ಲಿಯೇ ಮುದ್ರಿಸಿತ್ತು! ಶ್ರೀಮಠದ ಸ್ವಾಮೀಜಿಯವರು ಬೆಂಗಳೂರಿನ ರೆಸಾರ್ಟ್ ಒಂದರಲ್ಲಿ ಚಾತುರ್ಮಾಸ ಮಾಡುತ್ತಿದ್ದಾರೆಂದು ರೋಚಕ ವರದಿಯನ್ನು ಪ್ರಕಟಿಸಿದ ಪೀತ ಪತ್ರಿಕೆಯೊಂದು ಒಂದು ದಿನ ಮುಂಚೆಯೇ ತನ್ನ ವಾರ ಪತ್ರಿಕೆಯನ್ನು ಓದುಗರಿಗೆ ಹಂಚಿತು!

ಆರೋಗ್ಯ ಇಲಾಖೆಯ ವ್ಯಾನು, ಮಂಗನ ಕಾಯಿಲೆಯ ಬಗ್ಗೆ ಎಲ್ಲಾ ಮಾಹಿತಿಗಳನ್ನೂ ಮೈತುಂಬಾ ಚಿತ್ರಿಸಿಕೊಂಡು, ಒಳಗೆ ತನ್ನ ವೈದ್ಯಕೀಯ ಸಿಬ್ಬಂದಿಯನ್ನೂ ಕೂರಿಸಿಕೊಂಡು ಮಠದ ಸುತ್ತಮುತ್ತಲ ಊರುಗಳಲ್ಲಿ ದಿನಕ್ಕೆ ಎರಡೆರಡು ಬಾರಿ ಓಡಾಡುತ್ತಾ, ಜನರು ಕಾಡಿನೊಳಕ್ಕೆ ಹೋಗಬಾರದೆಂದೂ, ಸತ್ತುಹೋದ ಮಂಗನನ್ನು ನೋಡಿದರೆ, ತಕ್ಷಣ ಆರೋಗ್ಯ ಇಲಾಖೆಗೆ ಮಾಹಿತಿಕೊಡಬೇಕೆಂದೂ, ಯಾರಿಗಾದರೂ ಜ್ವರವು ಕಾಣಿಸಿಕೊಂಡರೆ ಸಮೀಪದ ಸರ್ಕಾರಿ ವೈದ್ಯರಿಂದ ಚಿಕಿತ್ಸೆಯನ್ನು ಪಡೆಯಬೇಕೆಂದು ಕೂಗುತ್ತಾ ಓಡಾಡತೊಡಗಿತು. ಸಾಗರ ತಾಳಗುಪ್ಪಾ ಮುಂತಾದ ಕಡೆ ಕೆ.ಎಫ್.ಡಿ (ಕ್ಯಾಸನೂರ್ ಫಾರೆಸ್ಟ್ ಡಿಸೀಸ್) ಬಗ್ಗೆ ಎಚ್ಚರಿಕೆ ಬೋರ್ಡುಗಳು, ಇತ್ತೀಚಿನ ಹುಡುಗರಿಗೆ, ಅದು ತಮ್ಮ ಊರಿನ 'ಮಂಗನ ಕಾಯಿಲೆ' ಎಂದು ನೆನಪು ಮಾಡಿಕೊಟ್ಟವು. 'ಯುಟ್ಯೂಬ್', 'ವಾಟ್ಸ್‌ಆ್ಯಪ್'ಗಳಲ್ಲಿ ವಿಧಾನ ಸೌಧದಲ್ಲಿ ಆಗಷ್ಟೇ ನಡೆಯುತ್ತಿದ್ದ ಬಿಸಿಬಿಸಿ ಚರ್ಚೆಯಷ್ಟೇ ಅಲ್ಲದೆ ಪಾರ್ಲಿಮೆಂಟಿನಲ್ಲಿ ಕರ್ನಾಟಕದ ಎಂಪಿಯೊಬ್ಬರು ಇದರ ಬಗ್ಗೆ ಪ್ರಸ್ತಾಪಿಸಿದ್ದು; ದೇಶ ವಿದೇಶಗಳಲ್ಲಿ ಕೋತಿಗಳನ್ನು ನೋಡಿಕೊಳ್ಳುವ ರೀತಿ; ಕೋತಿಗಳ ಕಾಟವನ್ನು ನಿಯಂತ್ರಿಸುವ ವಿಧಾನ; ಮಂಗನ ಕಾಯಿಲೆಯ ಲಕ್ಷಣಗಳು, ಅದರಿಂದ ಈವರೆಗೆ